ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 152-157
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಿಜಯನಗರ ಪೂರ್ವಕಾಲದ ಹಂಪಿಯ ಶಾಸನೋಕ್ತ ದೇವಾಲಯಗಳು

**ತಿರುಮಲ ಆರ್.**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ವಿಶ್ವಪಾರಂಪರಿಕ ತಾಣಗಳಲ್ಲಿ ಒಂದಾದ ಹಂಪಿಯು ಕರ್ನಾಟಕ ರಾಜ್ಯದ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಒಂದು ಚಿಕ್ಕ ಐತಿಹಾಸಿಕ ಗ್ರಾಮವಾಗಿದೆ. ಹಂಪಿ 150 ರಿಂದ 200 ಉತ್ತರ ಅಕ್ಷಾಂಶ, 700 ರಿಂದ 300 ಪೂರ್ವರೇಖಾಂಶದಲ್ಲಿದೆ. ಇದರ ಪೂರ್ವಕ್ಕೆ ಬಳ್ಳಾರಿ, ಆಂಧ್ರಪ್ರದೇಶದ ಅನಂತಪುರ, ಕರ್ನೂಲ್, ಪಶ್ಚಿಮಕ್ಕೆ ದಾವಣಗೆರೆ, ಗದಗ, ದಕ್ಷಿಣಕ್ಕೆ ಚಿತ್ರದುರ್ಗ, ಉತ್ತರಕ್ಕೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ಗಡಿಗಳಾಗಿವೆ. ಹಂಪಿ ಎಂಬ ಹೆಸರನ್ನು 'ಪಂಪ' ಎಂಬುದರಿಂದ 'ಹಂಪಿ' ಯಾಗಿರಬೇಕೆಂದು ಎಂಬ ಅಭಿಪ್ರಾಯವಿದೆ. 'ಪಂ' ಅಂದರೆ ಅಮೃತವೆಂದೂ 'ಪ' ಎಂದರೆ ಸ್ವರ್ಣವೆಂದು ಅರ್ಥೈಸಿ, ದೇವರಿಗೆ ಅಮೃತ ಸಮಾನವಾದ ಮೋಕ್ಷವನ್ನ ಸಂಪತ್ ರೂಪವಾದ ಭೋಗವನ್ನು ಕೊಟ್ಟು ರಕ್ಷಿಸುವಂತಹದ್ದಾಗಿರುವುದರಿಂದ ಇದಕ್ಕೆ 'ಪಂಪಾ' ಎಂದು ಹೆಸರಾಯಿತೆಂದು ಪಂಪಾ ಮಹಾತ್ಮೆ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ವಿಜರನಗರ ಪೂರ್ವಕಾಲದ ಹಂಪಿಯ ಶಾಸನೋಕ್ತ ದೇವಾಲಯಗಳ ಬಗ್ಗೆ ವಿವರಿಸಲಾಗಿದೆ.*

***Keywords:*** *ವಿಜಯನಗರ, ಹಂಪಿ, ಐತಿಹಾಸಿಕ ಸ್ಥಳ, ದೇವಾಲಯಗಳು, ಧಾರ್ಮಿಕ ಕ್ಷೇತ್ರ.*

## ಪೀಠಿಕೆ

ಇತಿಹಾಸ ಪ್ರಸಿದ್ಧ ಹಂಪಿ ಕ್ಷೇತ್ರಕ್ಕೆ ಪಂಪಾಕ್ಷೇತ್ರ, ಪಂಪಾತೀರ್ಥ, ಭಾಷ್ಕರ ಕ್ಷೇತ್ರ ಹೊಸಪಟ್ಟಣ, ವಿರೂಪಾಕ್ಷ ಕ್ಷೇತ್ರ, ದಕ್ಷಿಣ ಕಾಶಿ ಹೀಗೆ ಮುಂತಾದ ಪರ್ಯಾಯ ಹೆಸರುಗಳಿಂದ ಕರೆಯುತ್ತಿದ್ದ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖವಿದೆ. ಹಂಪಿಯನ್ನು ರಾಮಾಯಣ ಕಾಲದ ಕಿಷ್ಕಿಂಧೆ ಎಂದು ನಂಬುವುದರ ಜೊತೆಗೆ ಪೌರಾಣಿಕವಾಗಿ ಈ ಸ್ಥಳವನ್ನು ಶಿವ ಮತ್ತು ಗಿರಿಜೆಯು ನೆಲೆಸಿರುವ ಪಂಪಾಕ್ಷೇತ್ರವೆಂದು ನಂಬಲಾಗಿದೆ. ಹಂಪಿಯಲ್ಲಿ ಶಾಸನೋಕ್ತ ಎರಡು ದೇವಾಲಯಗಳಿವೆ.

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ, ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ.[1] ದೇವಾಲಯ ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದು ಬಂದಿರುವುದು ತಿಳಿದ ಸಂಗತಿ. ಮಾನವ ತನ್ನ ಬದುಕಿಗಾಗಿ ಪ್ರಕೃತಿಯೊಂದಿಗೆ ನಡೆಸಬೇಕಾದ ನಿರಂತರ ಸೆಣಸಾಟದಲ್ಲಿ ಪ್ರಕೃತಿಯ ವಿಸ್ಮಯಗಳಾದ ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚು ಮೊದಲಾದವು ಅವನಲ್ಲಿ ಭೀತಿ ಹುಟ್ಟಿಸಿದ್ದವು. ಇವುಗಳಿಂದ ನಿಸರ್ಗದಲ್ಲಿ ಎಲ್ಲಕ್ಕಿಂತ ಮಿಗಿಲಾದ ಅದ್ಭುತ ಶಕ್ತಿಯೊಂದು ಇದೆಯೆಂಬುದನ್ನು ಅರಿತ. ಆ ಶಕ್ತಿಯನ್ನೇ ದೇವರೆಂದು ನಂಬಿದ.[2] ತನಗಾಗಿ ಕಟ್ಟಿಕೊಂಡ ಮನೆ 'ಗೃಹವಾಸ್ತುಶಿಲ್ಪ' ಎನಿಸಿದರೆ, ತನ್ನ

***Please cite this article as:*** ತಿರುಮಲ, ಆರ್. (2023). ವಿಜಯನಗರ ಪೂರ್ವಕಾಲದ ಹಂಪಿಯ ಶಾಸನೋಕ್ತ ದೇವಾಲಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 152–157.

ದೇವರಿಗಾಗಿ ಕಟ್ಟಿದ್ದು 'ಧಾರ್ಮಿಕ ವಾಸ್ತುಶಿಲ್ಪ' ಅಥವಾ 'ದೇವಾಲಯ ವಾಸ್ತುಶಿಲ್ಪ'[3] ಎನಿಸಿತು. ದೇವರು ಮಾನವನ ವೈಯಕ್ತಿಕ ಭಾವನೆಗಳಲ್ಲಿ ಸ್ಥಾನವನ್ನು ಪಡೆದಂತೆ ದೇವಾಲಯಗಳು ಸುತ್ತಮುತ್ತಲಿನ ಸಮಾಜದಲ್ಲಿ ಸ್ಥಾನವನ್ನು ಪಡೆದವು. ಅವು ಇಡೀ ಸಮಾಜದ ಧರ್ಮ ಮತ್ತು ಭಕ್ತಿಯ ಪ್ರತೀಕವೆನಿಸಿ ಪೂಜಾರ್ಹವಾದವು. ತನ್ನ ಮನೆಯೊಳಗೆ ವ್ಯಕ್ತಿಯು ಮಾಡುವ ಪೂಜೆಯು 'ಆತ್ಮಾರ್ಥ' ಎನಿಸಿದರೆ, ದೇವಾಲಯದಲ್ಲಿ ಮಾಡುವ ಪೂಜೆಯು 'ಪರಾರ್ಥ' ಎನಿಸಿತು, ಸಮಾಜದ ಒಳಿತಿಗಾಗಿ ಅಲ್ಲಿ ದೇವರನ್ನು ಪೂಜಿಸಲಾಯಿತು.[4]

ಹಂಪಿ ಪರಿಸರದಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ನೊಳಂಬರು, ಕುರುಗೋಡು ಸಿಂದರು, ಹೊಯ್ಸಳರು ಹಾಗೂ ಕುಮ್ಮಟದುರ್ಗದ ಅರಸರಿಂದ ಆಳಲ್ಪಟ್ಟಿದ್ದು, ಬಾದಾಮಿ ಚಾಲುಕ್ಯ ಶೈಲಿಯಿಂದ ಕುಮ್ಮಟದುರ್ಗದ ಅರಸರ ಶೈಲಿಯವರೆಗೆ ದೇವಾಲಯಗಳನ್ನು ಕಾಣಬಹುದು. ಆದರೆ ಎರಡು ಶಾಸನೋಕ್ತ ದೇವಾಲಯಗಳಿದ್ದು ಇವುಗಳನ್ನು ಕುರುಗೋಡು ಸಿಂದರು ಮತ್ತು ಕುಮ್ಮಟದುರ್ಗ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ.

**ಕುರುಗೋಡು ಸಿಂದರು**

ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಅವಸಾನದ ನಂತರ ಕನ್ನಡ ನಾಡಿನ ರಾಜಕೀಯ ರಂಗನಾಟಕದಲ್ಲಿ ಪರಿಣಾಮಕಾರಿಯಾದ ಅನೇಕ ಬದಲಾವಣೆಗಳಾದವು, ಕಲ್ಯಾಣ ಚಾಲುಕ್ಯರು ವಿಘಟನೆಗೊಂಡ ನಂತರ ಕಲಚುರಿ, ಹೊಯ್ಸಳ ಹಾಗೂ ಸೇವುಣರು ಆಯಾ ನಿರ್ದಿಷ್ಟ ಪ್ರದೇಶದಲ್ಲಿ ಚಿಗಿತುಕೊಂಡು ವಿಸ್ತರಣೆಗೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡರು. ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶದ 'ತುಂಬಳ'ದಿಂದ ಆಳುತ್ತಿದ್ದ ಸಿಂದವಾಡಿಯ ಸಾಸಿರದ ಅರಸರಾದ ಸಿಂದರು ತಮ್ಮ ರಾಜಧಾನಿ ಪಟ್ಟಣವನ್ನು ಕುರುಗೋಡು ಸೀಮೆಗೆ ಸ್ಥಳಾಂತರಿಸಿದರು.[5] ಹಾಗೂ ತಮ್ಮ ಆಡಳಿತವನ್ನು ಬಲ್ಲುಕುಂದೆ–300ರ ಆಡಳಿತ ವಿಭಾಗಕ್ಕೆ ಮಾತ್ರ ಕೇಂದ್ರೀಕರಿಸಿದರು. ಉತ್ತರದ ವಜ್ರಬಂಡಿ ಬಸಪ್ಪನ ದೇವಾಲಯದಿಂದ ದಕ್ಷಿಣದ ರಾಚಮಲ್ಲ ದೇವಾಲಯದವರೆಗೂ ಕೆಲವು ದೇವಾಲಯಗಳನ್ನು ನಿರ್ಮಿಸಲಾಗಿವೆ. ಸಿಂದರು ಕುರುಗೋಡು ಪಟ್ಟಣದಿಂದ ಒಂದು ಶತಮಾನಗಳ ಕಾಲ ರಾಜ್ಯಭಾರ ಮಾಡಿದರು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮಹಾ ಸಾಮಂತರಾದ ಕುರುಗೋಡಿನ ಸಿಂದರು, ಕಲಚೂರಿಗಳ ಕಾಲದಲ್ಲಿ ಮಹಾಮಂಡಳೇಶ್ವರರಾಗಿ ನಿರ್ಣಾಯಕ ಪಾತ್ರವಹಿಸಿದರು. ಚರಿತ್ರೆಯಲ್ಲಿ ಕುರುಗೋಡಿನ ಸಿಂದರನ್ನು ಕೇವಲ ಅವರ ಹೋರಾಟದ ಬದುಕಿನಿಂದ (ಯುದ್ಧಗಳಿಂದ) ಮಾತ್ರ ಗುರುತಿಸಲಾಗದು. ಆಡಳಿತ ಜೊತೆ ಜೊತೆಗೆ ಅವರು ನಿರ್ಮಿಸಿದ ಕಲಾರಚನೆ ದೇವಾಲಯಗಳು ಅತೀ ಮುಖ್ಯವಾಗುತ್ತವೆ. ಚರಿತ್ರೆಯಲ್ಲಿ ಕೇವಲ ಸಾಮಂತರಾಗಿ ಪರಿಗಣಿಸಲ್ಪಡುವ ಕುರುಗೋಡ ಸಿಂದರು ಬಲ್ಲಕುಂದೆ ನಾಡಿನಲ್ಲಿ ಅವರ ರಾಜರನ್ನು ಮೀರಿಸುವಷ್ಟು ಅದ್ಭುತವಾದ ರಚನೆಗಳನ್ನು ನಿರ್ಮಿಸಿದ್ದಾರೆ.

**ಇಮ್ಮಡಿ ರಾಚಮಲ್ಲೇಶ್ವರ ದೇವಾಲಯ**

ಹಂಪಿಯ ಇಮ್ಮಡಿ ರಾಚಮಲ್ಲೇಶ್ವರ ದೇವಾಲಯ ದುರ್ಗದೇವಾಲಯದ ಉತ್ತರಕ್ಕೆ ಮತ್ತು ಮನ್ಮಥ ಹೊಂಡದ ಪಶ್ಚಿಮ ದಿಕ್ಕಿನಲ್ಲಿದೆ. ಕಣಶಿಲೆಯಿಂದ ನಿರ್ಮಿಸಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಇದರ ಒಂದು ಗರ್ಭಗೃಹ ಪಶ್ಚಿಮ ದಿಕ್ಕಿಗಿದ್ದು, ಅದರ ಮುಂದೆ ಅಂತರಾಳ ಇದರ ಮುಂಭಾಗದಲ್ಲಿ ನವರಂಗ, ಇನ್ನೂ ಮುಂದೆ ವಿಶಾಲವಾದ ಒಂದು ಅಂಕಣವಿದೆ. ಈ ನವರಂಗದ ದಕ್ಷಿಣ ಭಾಗಕ್ಕೆ ಮತ್ತೊಂದು ಅಂತರಾಳ ಹಾಗೂ ಗರ್ಭಗೃಹವಿದೆ. ಪಶ್ಚಿಮ ದಿಕ್ಕಿನ ಗರ್ಭಗೃಹದ ಹೊರ ಭಾಗವು ಇತರ ಕಟ್ಟಡಗಳಿಂದ ಆವೃತವಾಗಿದೆ. ಪದ್ಮ, ಕುಮುದ, ಕಪೋತಗಳಿಂದ ಕೂಡಿದೆ. ನವರಂಗದ ಮುಂದಿನ ಗೋಡೆಯು ಸಮತಟ್ಟಾಗಿದ್ದು, ಸೂರ್ಯನ

ಕೋನವು ಮುಂದಕ್ಕೆ ಚಾಚಿಕೊಂಡಿದೆ. ಕದಂಬ–ನಾಗರ ಶೈಲಿಯ ಏಳು ತಲಗಳಿವೆ. ಇವುಗಳಲ್ಲಿ ಹಿಂಚಾಚು, ಕಂಠ, ಕಪೋತ ಭಾಗವನ್ನು ಒಳಗೊಂಡಿದೆ. ಇದರ ಮಧ್ಯದಲ್ಲಿ ಪದ್ಮವನ್ನು ಹೊಂದಿದೆ. ನಂತರ ಭಾಗದಲ್ಲಿ ಚೌಕಾಕಾರದ ಗ್ರೀವ, ಪದ್ಮ ಮತ್ತು ಶಿಖರ ಭಾಗವನ್ನು ಹೊಂದಿದೆ. ಇದರಲ್ಲಿ ಸುಖನಾಸಿ ಭಾಗ ಇರುವುದಿಲ್ಲ. ನವರಂಗದ ಬಾಗಿಲವಾಡವು ತ್ರಿಶಾಖೆಗಳಿಂದ ಕೂಡಿದೆ. ಎಲ್ಲಾ ಶಾಖೆಗಳು ಲಲಾಟದಲ್ಲಿ ಮುಂದುವರೆಯುತ್ತಾವೆ. ಶಾಖೆಯ ಕೆಳಭಾಗದಲ್ಲಿ ಯಾವುದೇ ರೀತಿಯ ಅಲಂಕಾರ ಇರುವುದಿಲ್ಲ. ನವರಂಗವು ಮೂರು ಕಡೆಗಳಲ್ಲಿ ಇಳಿಜಾರದ ಭಾವಣಿಯನ್ನು ಹೊಂದಿದೆ. ಇದರ ಅಧಿಷ್ಠಾನವು ನೆಲದಲ್ಲಿ ಹೂತಿದೆ. ಇದರ ಭಾಗಗಳಾದ ಕಂಠ ಮತ್ತು ಪದ್ಮ ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತಾವೆ. ನವರಂಗವು ಹದಿನಾರು ಕಂಬಗಳು ಹೊಂದಿದ್ದು. ಇದರ ಮಧ್ಯದಲ್ಲಿ ನಾಲ್ಕು ಕಂಬಗಳು ವಿಶೇಷತೆಯಿಂದ ಕೂಡಿವೆ. ಇವುಗಳಲ್ಲಿ ಪಾದ, ಪೀಠ, ದಂಡ, ದಂಡಾಗ್ರ, ಬೋದಿಗೆಗಳು ಹೊಂದಿವೆ. ಪೀಠ ಭಾಗಗಳು ಚೌಕಾಕಾರವಾಗಿವೆ. ನಂತರದ ಭಾಗದಲ್ಲಿ 16–8–16 ರ ಪಟ್ಟಿಕೆಯ ಅಲಂಕರಣೆ ಹೊಂದಿವೆ. ನಂತರದ ಭಾಗ ಚೌಕಾಕಾರವಾಗಿದೆ. ನಂತರದಲ್ಲಿ ಮಡಕೆ ಮೇಲ್ಭಾಗವನ್ನು ಹಾಗೂ ಬೋದಿಗೆಗಳನ್ನು ಹೊಂದಿವೆ. ನವರಂಗದ ಮಧ್ಯದಲ್ಲಿಯೂ ಛತ್ತಿನ ಅಲಂಕರಣೆಯಿದೆ. ಪಶ್ಚಿಮ ಗರ್ಭಗೃಹದ ಬಾಗಿಲವಾಡವು ತ್ರಿಶಾಖೆಗಳನ್ನು ಒಳಗೊಂಡಿದೆ. ಎಲ್ಲಾ ಶಾಖೆಗಳು ಲಲಾಟದಲ್ಲಿ ಮುಂದುವರಿಯುತ್ತಾವೆ. ಉತ್ತರ ಮತ್ತು ಪಶ್ಚಿಮ ಭಿತ್ತಿಯಲ್ಲಿ ಪೂಜೆಯ ವಸ್ತುಗಳನ್ನು ಇಡಲು ಕಿರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಗರ್ಭಗೃಹದ ಮಧ್ಯದ ಭಾವಣಿಯು ನವರಂಗದಲ್ಲಿರುವ ಭಾವಣಿಯನ್ನು ಹೋಲುತ್ತದೆ. ನವರಂಗದ ದಕ್ಷಿಣದ ಕಡೆಗೆ ಎರಡು ಕಂಬಗಳಿರುವ ಮತ್ತೊಂದು ಅಂಕಣವಿದೆ. ಇದರ ಕಂಬಗಳು ನಂತರ ಕಾಲದವು ಎಂಬುವುದು ತಿಳಿಯುತ್ತದೆ. ದಕ್ಷಿಣ ಭಾಗದ ಅಂತರಾಳದ ಬಾಗಿಲುವಾಡವು ಪಶ್ಚಿಮದಲ್ಲಿರುವ ಗರ್ಭಗೃಹವನ್ನು ಹೋಲುತ್ತದೆ. ಆದರೆ ಇದು ಸರಳವಾದ ಲಲಾಟವನ್ನು ಹೊಂದಿದೆ. ಇದು ಭಿನ್ನವಾದ ವಾಸ್ತು ಶೈಲಿಯನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡವು ಸಹ ಸರಳವಾಗಿದ್ದು, ಇದರ ಭಾವಣಿಗಳು ನವರಂಗದಲ್ಲಿರುವ ಮಧ್ಯದ ಭಾವಣಿಯಂತೆ ಇವೆ. ಅಂತರಾಳದ ಭಾವಣಿಯಲ್ಲಿ ಪದ್ಮದ ದಳಗಳು ಇವೆ. ಗರ್ಭಗುಡಿಯ ಮಧ್ಯದಲ್ಲಿ ವೃತ್ತಾಕಾರದ ಪೀಠದ ಮೇಲೆ ಶಿವಲಿಂಗವಿದೆ. ದಕ್ಷಿಣ ಮತ್ತು ಪೂರ್ವದ ಭಿತ್ತಿಯಲ್ಲಿ ಪೂಜಾ ಸಾಮಗ್ರಿಗಳನ್ನು ಇಡಲು ಕಿರು ದೇವಾಲಯಗಳಿವೆ. ದಕ್ಷಿಣ ಭಾಗದ ಗರ್ಭಗೃಹದ ಮುಂಭಾಗದ ಗರ್ಭಗೃಹಕ್ಕಿಂತ ನಂತರ ಕಾಲದಲ್ಲಿ ನಿರ್ಮಿಸಲಾಗಿದೆ. ದಕ್ಷಿಣ ದಿಕ್ಕಿನ ಗರ್ಭಗೃಹದ ಹೊರಗಿನ ಭಾಗ ಕುರುಗೋಡು ಮತ್ತು ಕೋಳೂರು ದೇವಾಲಯಗಳಂತೆ ಇದೆ. ಆದರೆ ಕಪೋತ ಭಾಗದ ತುದಿಯಲ್ಲಿ ಹೆಚ್ಚು ಕಡಿದಾಗಿದ್ದು ಇಳಿಮುಖವಾಗಿದೆ. ಕುರುಗೋಡು ಮತ್ತು ಕೋಳೂರು ದೇವಾಲಯಗಳಲ್ಲಿ ಈ ಭಾಗವು ದುಂಡಾಗಿದ್ದು ವಿರಳವಾಗಿದೆ. ಆದ್ದರಿಂದ ಇದು ಅವುಗಳಿಗಿಂತ ಸ್ವಲ್ಪ ಈಚೆಗೆ ನಿರ್ಮಾಣವಾಗಿದೆ ಎನ್ನಬಹುದು. ಎರಡನೆಯ ರಾಚಮಲ್ಲನ ಅಧಿಕಾರಿ ಹೆಗ್ಗಡೆಯನು ಹಂಪಿಯ ಮನ್ಮಖ ತೀರ್ಥದ ಬಳಿ ರಾಚಮಲ್ಲನ ಸ್ಮರಣಾರ್ಥವಾಗಿ ರಾಚಮಲ್ಲೇಶ್ವರ ದೇವಾಲಯವನ್ನು ಕಟ್ಟಿಸುತ್ತಾನೆ. ಇಮ್ಮಡಿ ರಾಚಮಲ್ಲನ ಮಗ ವೀರಕಲಿ ದೇವರಸನು ಕ್ರಿ.ಶ. 1199ರ ವೇಳೆಗೆ ಅಧಿಕಾರ ರೂಢನಾದ ಬಗೆಗೆ ವಿವರಣೆ ಇದೆ. ಈ ಶಾಸನದಲ್ಲಿ ಉಲ್ಲೇಖ ಇರುವುದು ಸ್ಪಷ್ಟವಾಗಿ ತಿಳಿಯುತ್ತದೆ.[6] ಧಾರ್ಮಿಕವಾಗಿ ಅತ್ಯಂತ ಮಹತ್ವವುಳ್ಳ ಹಂಪೆಯ ರಕ್ಷಣೆಗಾಗಿ ವೀರ ಕಲಿದೇವರಸನು ತನ್ನ ಸಾಮಂತನನ್ನು ನೇಮಕ ಮಾಡಿರುತ್ತಾನೆ. ವಿರೂಪಾಕ್ಷತೀರ್ಥ, ರಕ್ಷಣಾ ತೀರ್ಥವಾಗಿ ಸಾಮಂತ ಮಾದಯ್ಯ ನಾಯಕನು

ಮಾತಂಗ ಪರ್ವತವನ್ನು ಪರಿಪಾಲಿಸುತ್ತಿದ್ದ ಎಂಬ ಉಲ್ಲೇಖ ಶಾಸನದಲ್ಲಿದೆ.

**ಕುಮ್ಮಟದ ನಾಯಕರು**

ಕ್ರಿ.ಶ. 1280ರ ವೇಳೆಗೆ ಮುಮ್ಮಡಿ ಸಿಂಗೇಯನಾಯಕ ಎಂಬುವನು ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಇವನು ಮೊದಲಿಗೆ ಹೊಯ್ಸಳರ ಪರವಿದ್ದು, ನಂತರ ಸೇವುಣರ ಪಕ್ಷವಹಿಸುತ್ತಾನೆ. ಈ ನಡುವೆ ದೊರವಡಿ (ಇಂದಿನ ದರೋಜಿ, ಬಳ್ಳಾರಿ ತಾಲೂಕು), ಮತ್ತು ಕಂಪಲಿ ಪ್ರದೇಶಗಳನ್ನು ಗೆದ್ದು, ನಂತರದಲ್ಲಿ ಕುಮ್ಮಟದುರ್ಗವನ್ನು ಹಿಡಿಯುತ್ತಾನೆ. ಹೊಸಪೇಟೆಯಿಂದ ಉತ್ತರಕ್ಕೆ ತುಂಗಭದ್ರೆಯ ಆಚೆಗಿರುವ ಕುಮ್ಮಟದುರ್ಗ ಪ್ರಾಕೃತಿಕವಾಗಿ ರಕ್ಷಣೆ ಪಡೆದಿರುವ ಗಿರಿದುರ್ಗವಾಗಿದೆ. ಈ ಮಹತ್ವದ ದುರ್ಗವನ್ನು ಸಿಂಗೇಯನಾಯಕ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಪ್ರಾರಂಭಿಸುತ್ತಾನೆ. ಕಂಪಿಲನ ಮತ್ತೊಂದು ರಾಜಧಾನಿ, ಹೊಸಮಲೆದುರ್ಗ.[7] ಇದು ಹೊಸಪೇಟೆ ತಾಲ್ಲೂಕಿನ ಇಂದಿನ ರಾಮಘಡ ಸ್ಥಳವಾಗಿದೆ.

ಮುಮ್ಮಡಿ ಸಿಂಗೇಯನಾಯಕ ಹಂಪಿಯ ಹೇಮಕೂಟದಲ್ಲಿ ದೇವಾಲಯವೊಂದರ ಶಾಸನ, ಇವನ ಮಗನಾದ ವೀರ ಕಂಪಿಲದೇವನು ಸಂಗಮೇಶ್ವರ ದೇವರ ಆರಾಧಕನಾಗಿದ್ದು, ತನ್ನ ತಾಯಿ ಮಾದನಾಯಕಿತಿ ಮತ್ತು ತಂದೆ ಸಿಂಗೇಯನಾಯಕ ಹಾಗೂ ಪೆರುಮೆಯ ನಾಯಕ ಇವರ ಜ್ಞಾಪಕಾರ್ಥವಾಗಿ (ಶಾಸನವಿರುವ) ಶಿವಾಲಯವೊಂದನ್ನು ಕಟ್ಟಿಸಿ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆಂದು ತಿಳಿಸುತ್ತದೆ.[8]

**ಕಂಪಿಲರಾಯ ದೇವಾಲಯ (ತ್ರಿಕೂಟ ದೇವಾಲಯ) ಹೇಮಕೂಟ**

ಹಂಪಿಯ ಹೇಮಕೂಟ ಬೆಟ್ಟದಲ್ಲಿರುವ ಈ ದೇವಾಲಯವು ಸಭಾಮಂಟಪದ ಕಂಬದ ಮೇಲಿರುವ ಶಾಸನ ಶ್ರೀಸಂಗಮೇಶ್ವರ ದೇವರ ದಿವ್ಯ ಪಾದಪದ್ಮೋದಕರಾದ ಮುಮ್ಮಡಿ ಸಿಂಗೆಯನಾಯಕನ ಮಗ ವೀರ ಕಂಪಿಲದೇವನು ಶಿವಾಲಯವನ್ನು ಕಟ್ಟಿಸಿ, ತಾಯಿ ಮಾರನಾಯಕಿತಿ, ತಂದೆ ಸಿಂಗಯನಾಯಕ ಮತ್ತು ಪೆರುಡಿನಾಯಕನ ಹೆಸರಿನಲ್ಲಿ ಮೂರು ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿದನೆಂದು ತಿಳಿಸುತ್ತದೆ.[9] ಕಳಿಂಗ ಮಾದರಿಯಲ್ಲಿ ಮೂರು ತಲಗಳನ್ನು ಒಳಗೊಂಡಿರುವಂತೆ ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯವು ಹೇಮಕೂಟ ಬೆಟ್ಟದಲ್ಲಿದೆ. ಉತ್ತರಾಭಿಮುಖವಾಗಿರುವ ದೇವಾಲಯವು ತಲಾ ಮೂರು ಗರ್ಭಗೃಹಗಳು ಅದರ ಮುಂದೆ ಅಂತರಾಳಗಳು ಇದ್ದು, ಅವುಗಳ ಮಧ್ಯೆದಲ್ಲಿರುವ ನವರಂಗಕ್ಕೆ ತೆರೆದುಕೊಳ್ಳುತ್ತವೆ ಹಾಗೂ ಅದರ ಮುಂದೆ ಉತ್ತರಕ್ಕೆ ಮುಖಮಂಟಪವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ ಕುಮುದ ಮತ್ತು ಕಪೋತವನ್ನು ಹೊಂದಿದೆ. ಅರೆಗಂಭಗಳ ಮಧ್ಯೆ ಚೌಕಾಕಾರದ ಪುಷ್ಪಗಳ ಅಲಂಕರಣೆಯ ಪಟ್ಟಿಕೆಯು ಭಿತ್ತಿಯ ಮಧ್ಯದಲ್ಲಿದೆ. ಪೂರ್ವ ಪಶ್ಚಿಮ ಮತ್ತು ದಕ್ಷಿಣ ಗರ್ಭಗೃಹದ ಭಿತ್ತಿಯಲ್ಲಿ ಸುರಳಿ ಅಲಂಕರಣೆಯ ನಡುವೆ ವ್ಯಕ್ತಿಗಳ ಉಬ್ಬು ಶಿಲ್ಪಗಳು ಇದ್ದು ಅವು ಕೀರ್ತಿಮುಖದಿಂದ ಹೊರಹೊಮ್ಮಿವೆ. ಚಪ್ಪಡಿ ಕಲ್ಲುಗಳಿಂದ ಭಿತ್ತಿಯನ್ನು ರಚಿಸಲಾಗಿದೆ. ಭಿತ್ತಿಯ ಮೇಲೆ ಪ್ರಸ್ತರವಿದೆ. ಮುಖ ಮಂಟಪದ ಮೇಲಿರುವ ಪ್ರಸ್ತರವು ದೊಡ್ಡದಾಗಿದೆ. ತಲದ ಭಾಗದಲ್ಲಿ ಒಂಭತ್ತು ತಲಗಳು ಕೆಳಗಿನಿಂದ ಮೇಲೆ ಕಿರಿದಾಗುತ್ತ ಸಾಗುತ್ತವೆ. ಒಂಭತ್ತನೆಯ ತಲದ ಮೇಲೆ ಚೌಕಾಕಾರದ ಪದ್ಮವಿದ್ದು ಅದರ ಮೂಲೆಗಳಲ್ಲಿ ಮುಂಚಾಚುಗಳಿವೆ. ಚೌಕಾಕಾರದ ಗ್ರೀವ ಮತ್ತು ಶಿಖರಗಳಿವೆ. ಪಶ್ಚಿಮ ಗರ್ಭಗೃಹದ ಶಿಖರದ ಮೇಲೆ ಸ್ತೂಪಿವಿದೆ. ಉಳಿದ ಪೂರ್ವ ಮತ್ತು ದಕ್ಷಿಣ ಶಿಖರದ ಮೇಲೆ ಸ್ತೂಪಿಗಳಿಲ್ಲ. ಪ್ರತಿ ಗರ್ಭಗೃಹದ ತಲಗಳ ಭಾಗದಿಂದ ಸುಖನಾಸಿ ಭಾಗವು ಹೊರಬಂದಿದ್ದು, ಅದರಲ್ಲಿ ಕೂಡು ಮತ್ತು ಕೀರ್ತಿಮುಖಗಳಿವೆ. ಇನ್ನೂ ಉಳಿದ ತಲಗಳ ಮಧ್ಯಭಾಗಗಳಲ್ಲಿ ಶಿಲ್ಪಗಳ ಸಾಲಿನ

ಕೆತ್ತನೆಗಳಿವೆ. ಅವುಗಳಲ್ಲಿ ಗಣೇಶ, ನಾಟ್ಯ ಶಿವ, ಭೈರವ, ವಿಷ್ಣು, ನರಸಿಂಹ ಮತ್ತು ಸೂರ್ಯನ ಉಬ್ಬು ಶಿಲ್ಪಗಳಿವೆ. ಪಶ್ಚಿಮ ಗರ್ಭಗೃಹ ಶಿಖರ ಭಾಗದಲ್ಲಿ ಬ್ರಹ್ಮ ಮತ್ತು ದಕ್ಷಿಣ ಗರ್ಭಗೃಹದ ಶಿಖರದಲ್ಲಿ ಕುಳಿತ ಶಿವನ ಉಬ್ಬು ಶಿಲ್ಪಗಳಿವೆ. ತೆರೆದ ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ. ದಕ್ಷಿಣ ಭಾಗದಲ್ಲಿರುವ ಕಂಬದ ಕೆಳಗಿನ ಭಾಗವು ಸರಳವಾಗಿದೆ. ಅದರಲ್ಲಿ ಎಲ್ಲಾ ಭಾಗಗಳಿವೆ. ಉತ್ತರ ಭಾಗದ ಕಂಬಗಳು ನವರಂಗದಲ್ಲಿರುವ ಕಂಬಗಳನ್ನು ಹೋಲುತ್ತವೆ. ಕಕ್ಷಾಸನವು ಮುಖಮಂಟಪದ ಮೂರು ಕಡೆಗಳಲ್ಲಿ ಇದೆ. ಉತ್ತರ ಭಾಗದ ಕಕ್ಷಾಸನದಲ್ಲಿ ಪೂರ್ಣಕುಂಭದ ಅಲಂಕರಣೆಯಿದೆ. ಮುಖಮಂಟಪದ ಮುಂದಿನ ಭಾಗವು ತೆರೆದಿದೆ. ಅದರ ಮಧ್ಯಭಾಗದಲ್ಲಿ ವೇದಿಕೆ ಇದ್ದು ಅದರ ಸುತ್ತ ನಾಲ್ಕು ಕಂಬಗಳು ಭುವನೇಶ್ವರಿಯನ್ನು ಆಧಾರಿಸಿವೆ. ಕಂಬಗಳು ಘನಾಕೃತಿಯಾಗಿದ್ದು 16–8–16 ಭಾಗದ ಅಲಂಕರಣೆಯಿದೆ. ನವರಂಗದ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ಭಾಗದ ಒಳಭಿತ್ತಿಯಲ್ಲಿ ತಲಾ ಎರಡು ದೇವಕೋಷ್ಟಕಗಳಿವೆ. ಪ್ರತಿ ಕೋಷ್ಟಕವನ್ನು ಕಳಿಂಗ ಮಾದರಿಯ ಕಿರು ದೇವಾಲಯದಂತೆ ರಚಿಸಲಾಗಿದೆ. ಪಶ್ಚಿಮ ಭಿತ್ತಿಯ ಕೋಷ್ಟಕವನ್ನು ದ್ರಾವಿಡ ಶೈಲಿಯ ಕಿರು ದೇವಾಲಯ ಮಾದರಿಯಂತೆ ರಚಿಸಿದ್ದು, ಅದರ ಇಕ್ಕೆಲೆಗಳಲ್ಲಿ ನಾಗರ ಮಾದರಿಯ ಕಂಬಗಳಿವೆ. ಭುವನೇಶ್ವರಿಯ ಮಧ್ಯ ಭಾಗದಲ್ಲಿ ಮೂರು ವರ್ತುಲಗಳ ಅಲಂಕರಣೆಯಿದ್ದು, ಅದರ ನಾಲ್ಕು ಮೂಲೆಗಳಲ್ಲಿ ಕೀರ್ತಿಮುಖಗಳ ಅಲಂಕರಣೆ ಇದೆ. ಪೂರ್ವ ಭಾಗದ ಭತ್ತಿನ ತೊಲೆಯು ಆಗ್ನೇಯ ಭಾಗದಲ್ಲಿ ಉದ್ದವು ಕಿರಿದಾಗಿರುವುದರಿಂದ ಅದನ್ನು ಆಧರಿಸಿರುವಂತೆ ಮತ್ತೊಂದು ಕಂಬವನ್ನು ಗೋಡೆಗೆ ಆನಿಸಿದಂತೆ ನಿಲ್ಲಿಸಿ ತೊಲೆಗೆ ಆಧಾರವನ್ನು ನೀಡಲಾಗಿದೆ. ಈ ಕಂಬದ ಮೇಲೆ ಉಲ್ಲೇಖಿಸಿದ ಶಾಸನವಿದೆ.

ದಕ್ಷಿಣ ಭಾಗದ ಗರ್ಭಗೃಹದ ಅಂತರಾಳದ ಬಾಗಿಲವಾಡದ ಕೆಳಗೆ ಎರಡು ಕಡೆಗಳಲ್ಲಿ ಪೂರ್ಣಕುಂಭಗಳಿದ್ದು, ಅರೆಗಂಬದ ಅಲಂಕರಣೆಯ ಶಾಖೆಗಳಿವೆ. ಲಲಾಟ ಸರಳವಾಗಿದ್ದು, ಅದರಲ್ಲಿ ಯಾವುದೇ ಉಬ್ಬು ಶಿಲ್ಪಗಳಿಲ್ಲ. ಲಲಾಟದ ಮೇಲಿನ ಭಾಗದಲ್ಲಿ ದ್ರಾವಿಡ ಮತ್ತು ನಾಗರ ಮಾದರಿಯ ಕಿರು ದೇವಾಲಯಗಳ ಪ್ರತಿರೂಪಗಳನ್ನು ರಚಿಸಲಾಗಿದೆ. ಅಂತರಾಳದ ಭುವನೇಶ್ವರಿಯು ಗರ್ಭಗೃಹದ ಭುವನೇಶ್ವರಿಯನ್ನು ಹೋಲುತ್ತದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಲಲಾಟದಲ್ಲಿ ಯಾವುದೇ ಉಬ್ಬು ಶಿಲ್ಪಗಳಿಲ್ಲ. ಚೌಕಾಕಾರ ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಪೂರ್ವ ಮತ್ತು ಪಶ್ಚಿಮದ ಒಳಭಿತ್ತಿಯಲ್ಲಿ ಮುಂಚಾಚು ಇದೆ. ಭುವನೇಶ್ವರಿಯ ಮಧ್ಯಭಾಗದಲ್ಲಿ ಮೂರು ಅಂತರ್ಗತ ವರ್ತುಲಗಳಿವೆ. ಅದರ ಮಧ್ಯೆ ಭಾಗದಲ್ಲಿ ದುಂಡನೆಯ ಉಬ್ಬು ಅಲಂಕರಣೆಯಿದೆ. ಪೂರ್ವ ಭಾಗದ ಗರ್ಭಗೃಹ ಮತ್ತು ಅಂತರಾಳಗಳು ದಕ್ಷಿಣ ಭಾಗದ ಗರ್ಭಗೃಹದಂತೆ ಇದೆ. ಗರ್ಭಗೃಹದ ಪೂರ್ವ ಮತ್ತು ಉತ್ತರ ಭಾಗದ ಒಳಭಿತ್ತಿಗಳಲ್ಲಿ ಪೂಜಾ ಸಾಮಗ್ರಿಗಳನ್ನು ಇರಿಸಲು ಕಿರು ಮುಂಚಾಚುಗಳಿವೆ. ಪಶ್ಚಿಮ ಭಾಗದ ಗರ್ಭಗೃಹ ಮತ್ತು ಅಂತರಾಳಗಳು ದಕ್ಷಿಣ ಭಾಗದ ಗರ್ಭಗೃಹದಂತೆ ಇದೆ. ಆದರೆ ಇದರಲ್ಲಿ ಉತ್ತರ ಮತ್ತು ಪಶ್ಚಿಮ ಭಾಗದ ಒಳಭಿತ್ತಿಯಲ್ಲಿ ಪೂಜಾ ಸಾಮಗ್ರಿಗಳನ್ನು ಇರಿಸಲು ಕಿರು ಮುಂಚಾಚುಗಳಿವೆ. ಈ ದೇವಾಲಯವನ್ನು ಕುಮ್ಮಟದ ಅರಸ ಕಂಪಿಲದೇವನು ಕ್ರಿ.ಶ.1325 ರಲ್ಲಿ ನಿರ್ಮಿಸಿದನು.

**ಅಡಿಟಿಪ್ಪಣಿಗಳು**


1. ಗೋಪಾಲ್, ಬಾ. ರಾ. (2017). *ವಾಸ್ತು: ಕರ್ನಾಟಕದ ಕಲೆಗಳು.* ಪು. 1
2. ಸುರೇಶ್, ಕೆ.ಎಂ. ಮತ್ತು ಇತರರು. (2001). *ಕರ್ನಾಟಕದ ದೇವಾಲಯ ಕೋಶ.* ಪು. 13
3. ಅಪರ್ಣ, ಕೂ.ಸ. (2021). *ದೇವಾಲಯ ವಾಸ್ತುಶಿಲ್ಪ ಪರಿಚಯ.* ಪು. 2
4. *ಅದೇ.,* ಪು.2

5. ಬಾಲಸುಬ್ರಮಣ್ಯ. (ಸಂ.) (2004). *ಕುರುಗೋಡು.* ಪು. 92
6. ಮಹದೇವ, ಸಿ ಮತ್ತು ಇತರರು. (2002). *ಹೊಸಪೇಟೆ ತಾಲೂಕು ದರ್ಶನ.* ಪು. 24
7. *ಅದೇ.,* ಪು. 24
8. *ಕನ್ನಡ ವಿಶ್ವವಿದ್ಯಾಲಯ ಶಾ.ಸಂ.3.* ಶಾ.ಸಂ. 59, ಪು. 50
9. *ಅದೇ.,*

**ಪರಾಮರ್ಶನ ಗ್ರಂಥಗಳು**


- ಅಪರ್ಣ, ಕೂ.ಸ. (2021). *ದೇವಾಲಯ ವಾಸ್ತುಶಿಲ್ಪ ಪರಿಚಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಬಾಲಸುಬ್ರಮಣ್ಯ, (ಸಂ.) (2004). ಕುರುಗೋಡು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ದೇವರಕೊಂಡಾರೆಡ್ಡಿ. (ಸಂ.) (1998). *ಬಳ್ಳಾರಿ ಜಿಲ್ಲೆ: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ದೇವರಕೊಂಡಾರೆಡ್ಡಿ (ಸಂ.). (1998). *ಕೊಪ್ಪಳ ಜಿಲ್ಲೆ: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ದೇವರಕೊಂಡಾರೆಡ್ಡಿ (ಸಂ.). (2000). *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 (ಹಂಪಿ ಶಾಸನಗಳು)* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಗೋಪಾಲ್, ಬಾ. ರಾ. (2017). *ವಾಸ್ತು: ಕರ್ನಾಟಕದ ಕಲೆಗಳು.* (ನಾಲ್ಕನೆಯ ಸಂಪುಟ), ಕನ್ನಡ ಸಾಹಿತ್ಯ ಪರಿಷತ್ತು.
- ಮಹದೇವ, ಸಿ., ಸುಬ್ಬಣ್ಣ ರೈ, ಮಾಧವ ಪೆರಾಜೆ. (2002). *ಹೊಸಪೇಟೆ ತಾಲೂಕು ದರ್ಶನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾಜಶೇಖರ, ಎಸ್. (1988). *ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.* ಸುಜಾತ ಪ್ರಕಾಶನ.
- ಸುರೇಶ್, ಕೆ.ಎಂ, ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್, ಸೋಮಶೇಖರ್ ಎಸ್.ವೈ. (1999). *ಕರ್ನಾಟಕ ದೇವಾಲಯ ಕೋಶ–ಬಳ್ಳಾರಿ ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- Acharya P.K. (1934). *Architecture of Manasara,* Vol-5, Oriental Book Reprint Corporation.
- Mahalingam. T.V. (1970). *Studies in the South Indian Temple complex.* Prasaranga, Karnatak University.
- Rajasekhara, S. (1983). *Karnataka Architecture.* Sujata Publications.
- Ramachandra Rao S.K. (1991). *Pratima Kosha (Encyclopedia of Indian Iconography)* Vol-V, Kalpataru Research Academy.